# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1840**
ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 23-03-2026
ಉತ್ತರಿಸುವ ಸಚಿವರು ಮಾನ್ಯ ಇಂಧನ ಸಚಿವರು

****

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಜಿಲ್ಲೆಯಲ್ಲಿ ಸ್ಥಾಪಿಸಬೇಕಾದ ಸೌರ ಪಾರ್ಕ್ ಯೋಜನೆಯ ಕಾಮಗಾರಿ ಯಾವ ಹಂತದಲ್ಲಿದೆ; ಅದರ ಸ್ಥಿತಿ-ಗತಿಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು.</td><td rowspan="3">ಕಲಬುರಗಿ ಜಿಲ್ಲೆಯ ಕಲಬುರಗಿ ತಾಲ್ಲೂಕಿನ ನದಿಸಿನ್ನೂರು ಮತ್ತು ಕಿರಣಗಿ ಗ್ರಾಮಗಳ ವ್ಯಾಪ್ತಿಯಲ್ಲಿ ಕೆ.ಆರ್.ಇ.ಡಿ.ಎಲ್ ಅಧೀನದಲ್ಲಿರುವ 551ಎಕರೆ 13 ಗುಂಟೆ ಜಮೀನಿನಲ್ಲಿ Tariff Based Competitive Bidding ಮಾದರಿಯಡಿಯಲ್ಲಿ 100 ಮೆ.ವ್ಯಾ ಸಾಮರ್ಥ್ಯದ ಸೌರ ಘಟಕವನ್ನು ಸ್ಥಾಪಿಸಲು ಟೆಂಡರ್ ಆಹ್ವಾನಿಸಿದ್ದು, ಯಶಸ್ವಿ ಬಿಡ್ಡುದಾರರಾದ M/s. JSW Neo Energy Limited ರವರಿಗೆ ದಿನಾಂಕ: 18.06.2025 ರಂದು Letter of Award/Allotment Letter ಅನ್ನು ನೀಡಲಾಗಿದೆ. ಅಭಿವೃದ್ಧಿದಾರರು ದಿನಾಂಕ: 23.07.2025 ರಂದು BESCOM ರವರೊಂದಿಗೆ ವಿದ್ಯುತ್ ಖರೀದಿ ಒಪ್ಪಂದವನ್ನು ಮಾಡಕೊಂಡಿದ್ದು, ಸದರಿ ಒಪ್ಪಂದದನ್ವಯ ಯೋಜನೆಯನ್ನು ಜನವರಿ 2027ರ ಅಂತ್ಯಕ್ಕೆ ಅನುಷ್ಠಾನಗೊಳಿಸಬೇಕಿದೆ.<br><br>ಆದರೆ, ಪ್ರಸ್ತಾಪಿತ ಯೋಜನಾ ಸ್ಥಳದಿಂದ ಸುಮಾರು 3 ಕಿ.ಮೀ. ಅಂತರದಲ್ಲಿ ಸಿಮೆಂಟ್ ಕಾರ್ಖಾನೆಗಳು ಸ್ಥಾಪನೆಯಾಗುತ್ತಿರುವುದರಿಂದ, ಸದರಿ ಸ್ಥಳದಲ್ಲಿ ಸೌರ ಘಟಕವನ್ನು ಸ್ಥಾಪಿಸುವುದು ತಾಂತ್ರಿಕವಾಗಿ ಕಾರ್ಯಸಾಧ್ಯವಾಗುತ್ತಿಲ್ಲ. ಆದುದರಿಂದ ಯೋಜನಾ ಸ್ಥಳವನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
<tr><td>ಆ)</td><td>ಈ ಯೋಜನೆಯ ಕಾಮಗಾರಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು; ಯಾವ ಕಾಲಮಿತಿಯೊಳಗೆ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು;</td></tr>
<tr><td>ಇ)</td><td>ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕಲಬುರಗಿ ಸೂಕ್ತ ಜಾಗವಾಗಿದ್ದು, ಇಲ್ಲಿ ಯೋಜನೆ ವೇಗಗೊಳಿಸುವ ಬಗ್ಗೆ ಸರ್ಕಾರ ಯಾವ ಯೋಜನೆಯನ್ನು ಹಮ್ಮಿಕೊಂಡಿದೆ;</td></tr>
<tr><td>ಈ)</td><td>ಇದಕ್ಕೆ ರಾಜ್ಯ ಸರ್ಕಾರದಿಂದ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನಗೊಳಿಸಲಾಗಿದೆ; ಮತ್ತು ಇದಕ್ಕೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು?</td><td>ಪ್ರಸ್ತುತ, ಅಭಿವೃದ್ಧಿದಾರರು ಸದರಿ ಯೋಜನೆಗೆ ಜೇವರ್ಗಿ ತಾಲ್ಲೂಕಿನ ಮಾಡ್ರಿ ಗ್ರಾಮದಲ್ಲಿ ಖಾಸಗಿ ಜಮೀನನ್ನು ಗುರುತಿಸುತ್ತಿದ್ದು, ಸದರಿ ಜಮೀನನ್ನು ಸೋಲಾರ್ ಘಟಕದ ಸ್ಥಾಪನೆಗೆ ಗುತ್ತಿಗೆಗೆ ನೀಡಲು ಜಮೀನು ಮಾಲೀಕರು ಆಸಕ್ತಿ ವ್ಯಕ್ತಪಡಿಸಿರುತ್ತಾರೆ. ಸೋಲಾರ್ ಯೋಜನೆಗೆ ಭೂ-ಮಾಲೀಕರಿಂದ ಒಪ್ಪಿಗೆ ಪತ್ರ ಪಡೆದ ನಂತರ, ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ ರವರು ನಿಗದಿ ಪಡಿಸುವ ಗುತ್ತಿಗೆ ದರದ ಆಧಾರದ ಮೇಲೆ ಕೆ.ಆರ್.ಇ.ಡಿ.ಎಲ್ ಸಂಸ್ಥೆಯಿಂದ ಭೂ-ಮಾಲೀಕರಿಂದ ಜಮೀನನ್ನು ಗುತ್ತಿಗೆ ಪಡೆದು M/s. JSW Neo Energy Limited ರವರಿಗೆ ಉಪಗುತ್ತಿಗೆ ನೀಡಲು ಕ್ರಮ ಕೈಗೊಳ್ಳಲಾಗುವುದು.<br>ಈ ಯೋಜನೆಗೆ ಸರ್ಕಾರದ ಯಾವುದೇ ಅನುದಾನ ಒದಗಿಸಿರುವುದಿಲ್ಲ.</td></tr>
</table>

ಸಂಖ್ಯೆ: ಎನರ್ಜಿ 102 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು